Sri H. N. NANJE GOWDA (Minister of State for Major Irrigation).—

(*a*) Yes.

(*b*) As this area could be irrigated by the Yagachi project, the supply of water from Hemavathy project is unnecessary.

(*c*) Does not arise in view of reply furnished above.

ಶ್ರೀ ಕೆ. ಎಚ್. ಹನುಮೇಗೌಡ.—ಹಾಸನ ತಾಲ್ಲೂಕಿನಲ್ಲಿ ಕಟ್ಟಾಯ, ಕಸಬಾ, ಶಾಂತಿಗ್ರಾಮ ಮತ್ತು ದುದ್ದ ಹೋಬಳಿಗಳು ಆಗಾಗ್ಗೆ ಕ್ಷಾಮಕ್ಕೆ ತುತ್ತಾಗುತ್ತವೆ. ಅಲ್ಲಿಗೆ ಯಗಚಿ ಯೋಜನೆಯ ನೀರು ಬರುತ್ತದೆ ಎಂದು ನಿರೀಕ್ಷಣೆ ಮಾಡಿಕೊಂಡಿದ್ದೆವು. ಆದರೆ ಈಗ ಯಗಚಿ ಯೋಜನೆ ಬರುವುದು ಸ್ವಲ್ಪ ಅನುಮಾನವಾಗಿದೆ. ಈ ಎಲ್ಲಾ ಕಾರಣಗಳಿಂದ ಹೇಮಾವತಿನದಿಗೆ ಗೊರೂರು ಹತ್ತಿರ ಕಟ್ಟಿರುವ ಅಣೆಕಟ್ಟಿಗೆ ಆಂಜನೇಯಪುರದ ಹತ್ತಿರ ಹೈಲೆವಲ್ ಚಾನಲ್ ಮುಖಾಂತರ ನೀರು ಕೊಡುವುದರಿಂದ ಮತ್ತು ಹೇಮಾವತಿಯ ಎಡದಂಡೆಯ ನಾಲೆಯಿಂದ ಲಿಫ್ಟ್ ಇರಿಗೇಷನ್ ಮುಖಾಂತರ ಈ ಬರಗಾಲಕ್ಕೆ ತುತ್ತಾಗುವ ಪ್ರದೇಶಗಳಿಗೆ ಶಾಶ್ವತವಾದ ಒಂದು ಪರಿಹಾರವನ್ನು ಕೊಡುವ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ಕೈಗೆದುಕೊಳ್ಳುತ್ತೀರಾ ?

†ಶ್ರೀ ಎಚ್. ಎನ್. ನಂಜೇಗೌಡ.—ಈಗ ಮಾನ್ಯ ಸದಸ್ಯರು ಆ ಪ್ರದೇಶಕ್ಕೆ ಯಗಚಿ ನದಿಯ ನೀರು ಬರುವುದು ಅನುಮಾನ ಎಂದು ಹೇಳಿದರು. ಆ ಯೋಜನೆಗೆ ಸಿ.ಡಬ್ಲ್ಯು.ಸಿ.ಸಿ. ಯವರ ಒಪ್ಪಿಗೆಯಾಗಿ ಅದು ಪ್ಲಾನಿಂಗ್ ಕಮಿಷನ್‌ನಲ್ಲಿ ಪೆಂಡಿಂಗ್ ಇದೆ ಎಂದು ನಾನು ಅನೇಕ ಸಲ ತಿಳಿಸಿದ್ದೇನೆ. ಇನ್ನು ಉಳಿದ ಬೇಡಿಕೆಯ ಬಗ್ಗೆ ತಾಂತ್ರಿಕ ವರದಿಯನ್ನು ಪರ್ಯಾಲೋಚನೆ ಮಾಡಿ ಸರ್ಕಾರದವರು ಆ ಬಗ್ಗೆ ತೀರ್ಮಾನವನ್ನು ಕೈಗೊಳ್ಳಬೇಕಾಗುತ್ತದೆ. ಜನಗಳ ಕಷ್ಟವನ್ನು ದೂರಮಾಡಬೇಕು ಎಂಬುದೇ ಸರ್ಕಾರನ ಉದ್ದೇಶ. ಆದ್ದರಿಂದ ಇದನ್ನು ಪರಿಶೀಲನೆ ಮಾಡಿ ಈ ಬಗ್ಗೆ ಒಂದು ತೀರ್ಮಾನವನ್ನು ಕೈಗೊಳ್ಳಬೇಕಾಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.—ಈಗ ಕಟ್ಟಾಯ, ಕಸಬಾ, ಶಾಂತಿಗ್ರಾಮ ಮತ್ತು ದುದ್ದ ಹೋಬಳಿಗಳಲ್ಲಿ ಮುಂಗಾರು ಮಳೆ ಆಗುತ್ತದೆ. ಹಿಂಗಾರಿನಲ್ಲಿ ಮಧ್ಯ ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಅಲ್ಲಿ ಮಳೆ ಆಗುವುದಿಲ್ಲ. ಆದ್ದರಿಂದ ಆ ಕಾಲದಲ್ಲಿ ಬಿಷ್ಕಿ ಬೆಳೆಗೆ ಎರಡು ಬದ, ಮೂರು ಪದ ನೀರುಕೊಟ್ಟರೆ ಅನುಕೂಲವಾಗುತ್ತದೆ. ಇದು ಬಹಳ ಉಪಯುಕ್ತವಾದ ಯೋಜನೆ. ಇದನ್ನು ಕಡ್ಡಾಯವಾಗಿ ಮಾಡಿಕೊಡಬೇಕು. ಆದ್ದರಿಂದ ಇದಕ್ಕೆ ಸರ್ಕಾರದವರು ಗಮನ ಕೊಡುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ನಾನು ಮೊದಲೇ ಹೇಳಿದ ಹಾಗೆ ಎಲ್ಲೆಲ್ಲಿ ನೀರು ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯತೆ ಇದೆ ಎಂಬುದನ್ನು ನೋಡಬೇಕಾಗಿದೆಯಲ್ಲದೆ ಇದರಲ್ಲಿ ಇತರ ಅನೇಕ ವಿಷಯಗಳು ಸಹ ಒಳಗೊಂಡಿರುವುದರಿಂದ ಆವೆಲ್ಲವನ್ನೂ ಆಲೋಚನೆ ಮಾಡಿ ತೀರ್ಮಾನ ಮಾಡಬೇಕಾಗಿದೆ. ಅಂತೂ ಇದನ್ನು ಪರಿಶೀಲನೆ ಮಾಡುತ್ತೇವೆ ಎಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ಈ ಹೇಮಾವತಿ ಯೋಜನೆಯಿಂದ ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಎಕರೆಗೆ ನೀರು ಒದಗಿಸುವುದಕ್ಕೆ ಸಾಧ್ಯ ಇದೆ ಎಂಬುದರ ಅಂಕಿ ಅಂಶಗಳನ್ನು ಕೊಡುತ್ತೀರಾ ಮತ್ತು ಸೆಮಿ ಡ್ರೈ ಪ್ರದೇಶದಲ್ಲಿ ಎಷ್ಟು ಎಕರೆಗೆ ಭತ್ತ ಬೆಳೆಸುವುದಕ್ಕೆ ನೀರು ಒದಗಿಸಿ ಕೊಡುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಈ ದಿನ ಅದರ ಅಂಕಿ ಅಂಶ ನನ್ನಲ್ಲಿ ಇಲ್ಲ. ಇಲ್ಲಿ ಪ್ರಶ್ನೆ ಇರುವುದು ಕ್ಷಾಮ ಪರಿಹಾರಕ್ಕೆ ಸಂಬಂಧಪಟ್ಟದ್ದು.

TOUR BY THE MINISTERS

373. Sri KAGODU THIMMAPPA (Sagar).—

Will the Chief Minister be pleased to state :—

(*a*) the number of miles each Minister has toured every month from the date of taking over the office by this Ministry till the end of December 1972 ;

(*b*) the amount spent in respect of each Minister regarding their tour so far;

(*c*) the number of days each Minister has toured every month ?

Sri H. M. CHANNABASAPPA (Minister for Public Works and Electricity) [On behalf of Sri D. DEVARAJ URS (Chief Minister)].—

(*a*), (*b*) and (*c*) The details are furnished in the statement placed on the Table of the House.*

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲಾ ಮಂತ್ರಿಗಳು ಪ್ರತೀ ತಿಂಗಳು 15 ದಿವಸಕ್ಕಿಂತ ಜಾಸ್ತಿ ಪ್ರವಾಸ ಮಾಡಿದ್ದಾರೆ. ಇದರಿಂದ ಇಲ್ಲಿ ವಿಧಾನ ಸೌಧದಲ್ಲಿ ಕಚೇರಿ ಕೆಲಸಕ್ಕೆ ತೊಂದರೆಯಾಗಿ ಕೆಲಸ ಕುಂಠಿತವಾಗಲಿಲ್ಲವೇ? ಇದರಿಂದ ನೀವು ಮಾಡಬೇಕಾದ ಕೆಲಸವನ್ನು ಮಾಡದೆ ಇರುವುದಕ್ಕೆ ಕಾರಣವಾಗುವುದಿಲ್ಲವೇ ?

† ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದರ ಬಗ್ಗೆ ಸೂಕ್ಷ್ಮವಾದ ಮಾರ್ಗದರ್ಶನ ಹಾಕಿಕೊಂಡಿದ್ದೇವೆಯೇ ವಿನಹ ರಾಜ್ಯದ ಕೆಲಸಗಳಿಗೆ ಅವಶ್ಯವಿದ್ದರೆ ಒಂದೊಂದು ದಿವಸ ಹೆಚ್ಚು ಪ್ರಯಾಣ ಮಾಡಬೇಕಾಗಿ ಬರುತ್ತದೆ

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮ ಮುಖ್ಯಮಂತ್ರಿಯವರು ಡಿಸೆಂಬರಿನಲ್ಲಿ 10 ಸಾವಿರ ಜಿಲ್ಲರೆ ಕಿಲೋಮೀಟರ್ ಪ್ರವಾಸ ಮಾಡಿದ್ದಾರೆ. ನಾವು 17 ಸಾವಿರ ಜಿಲ್ಲರೆ ಕಿಲೋಮೀಟರ್ ಪ್ರವಾಸ ಮಾಡಿದ್ದೀರಿ. ಆದರೆ 10 ಸಾವಿರ ಕಿಲೋಮೀಟರ್ ಪ್ರವಾಸ ಮಾಡಿದವರು 20 ಸಾವಿರ ರೂಪಾಯಿ ತೆಗೆದುಕೊಂಡಿದ್ದಾರೆ. ನಾವು 17 ಸಾವಿರ ಕಿಲೋಮೀಟರ್ ಪ್ರವಾಸ ಮಾಡಿ 11 ಸಾವಿರ ರೂಪಾಯಿ ತೆಗೆದುಕೊಂಡಿದ್ದೀರಿ. ಈ ವ್ಯತ್ಯಾಸ ಏಕೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಕೆಲವರು ರಸ್ತೆಯಲ್ಲಿ ಪ್ರಯಾಣ ಮಾಡಿದ್ದಾರೆ. ಕೆಲವರು ವಿಮಾನದಲ್ಲಿ ಮತ್ತು ಕೆಲವರು ನೀರಿನ ಮೇಲೆ ಪ್ರಯಾಣ ಮಾಡಿದ್ದಾರೆ. ಆದ್ದರಿಂದ ವಿಭಿನ್ನ ಪೆಚ್ಚಗಳು ಅವರವರ ಪ್ರಯಾಣದ ಮೇಲೆ ಅವಲಂಬಿಸಿಕೊಂಡಿದೆ.

ಶ್ರೀ ಟಿ. ಎಂ. ಮಂಜುನಾಥ್.—ತಾವು ಪ್ರವಾಸ ಮಾಡುವುದಕ್ಕೆ ನಮ್ಮ ಆಭ್ಯಂತರವಿಲ್ಲ. ಆದರೆ ತಾವು ಪ್ರವಾಸ ಫಿಕ್ಸ್ ಮಾಡುವಾಗ. ಒಂದು ಸ್ಥಳದ ಆಹ್ವಾನ ಬಂದು. ಅದಕ್ಕೆ ಒಪ್ಪಿಗೆ ಕೊಡಬೇಕಾದರೆ ತಮ್ಮ ಪಕ್ಷದ ಪ್ರೆಸಿಡೆಂಟರ ಅಪ್ಪಣೆ ಪಡದು ಬರಬೇಕೇ ಅಥವಾ ಯಾರಾದರೂ ಕರೆದರೆ ಒಪ್ಪಿಕೊಂಡು ಬರುತ್ತೀರಾ ? ಇದಕ್ಕೆ ಏನಾದರೂ ಒಂದು ಸಂಪ್ರದಾಯ ಇದೆಯೇ.

ಶ್ರೀ ಎಚ್. ಎಂ. ಚೆನ್ನಬಸಪ್ಪ.— ಅದಕ್ಕೆ ನಾವು ಒಳ್ಳೆಯ ಸಂಪ್ರದಾಯವನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಟಿ. ಎಂ. ಮಂಜುನಾಥ್.—ನಮ್ಮ ತಾಲ್ಲೂಕಿನಲ್ಲಿ ಆಂಥ ಒಂದು ಮಾತಾವರಣ ಇದ್ದಾಗ ತಾವು ತಮ್ಮ ಪಕ್ಷದ ಅನುಮತಿ ಪಡೆದು ಬರಬೇಕೆಂದು ಹೇಳಿದ ಸಮಾಚಾರ ಬಂದಿದೆ. ತಮ್ಮ ಮಂತ್ರಿ ಮಂಡಲದಲ್ಲಿ ಇಂತಿಂಥವರು ಇಂತಿಂಥ ಕಡೆ ಹೋಗೋಬೇಕೆಂದು ನಿಯಮವನ್ನು ಮಾಡಿದ್ದೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಪಕ್ಷದವರು ಕರೆದರೆ ಹೋಗಬೇಕು, ಬೇರೆ ಪಕ್ಷದವರು ಕರೆದರೆ ಹೋಗಬಾರದು ಮತ್ತು ಇಂಥವರು ಕರೆದರೆ ಮಾತ್ರ ಹೋಗಬೇಕೆಂದು ಯಾವುದೇ ನಿಯಮವೂ ಇಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಸ್ಥಳದ ಅಗತ್ಯತೆಯನ್ನು ನೋಡಿ ಇದನ್ನು ಮಾಡಬೇಕಾಗುತ್ತದೆ.

---

*Copy placed in the Mysore Legislature Library *vide* No. 44, dated 22nd **May 1973.**

ಶ್ರೀ ಕಾಗೋಡು ತಿಮ್ಮಪ್ಪ.—ಕೆಲವು ಮಂತ್ರಿಗಳು ತಿಂಗಳ 15 ರಿಂದ 28ರವರೆಗೆ ಪ್ರವಾಸ ಮಾಡಿದ್ದಾರೆ ಈ ರೀತಿ ಹೆಡ್‌ಕ್ವಾರ್ಟರ್ಸ್ ಬಿಟ್ಟು ಹೊರಗಡೆ ಇದ್ದರೆ, ಇಲ್ಲಿ ಇವರನ್ನು ನೋಡಲು ಬಂದು ಕಾಯುತ್ತಿರುವ ಜನರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಯಾವ ಮಂತ್ರಿಯವರು ಸಹ ನಿರ್ದಿಷ್ಟವಾದ ಅವಧಿಗಿಂತ ಹೆಚ್ಚು ಪ್ರವಾಸ ಮಾಡಬಾರದು ಎಂದು ಕಡ್ಡಾಯವಾಗಿ ತಿಳಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಕಡ್ಡಾಯವಾಗಿ ಮಾಡುವುದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಬಹಳ ತೊಂದರೆಯಾಗುತ್ತದೆ. ಉದಾಹರಣೆಗೆ ಒಂದು-ಎರಡು ತಿಂಗಳಿಂದ ಅಸೆಂಬ್ಲಿ ನಡೆಯುತ್ತಿದೆ. ಆದರೆ ಅಲ್ಲಿ ಅನೇಕ ಕೆಲಸಗಳು ಕಾಯ್ದುಕೊಂಡು ಇರುತ್ತದೆ. ಅದನ್ನು ಮೋಗಿ ಮಾಡದಿದ್ದರೆ ಕೆಲಸ ಕುಂಠಿತವಾಗುತ್ತದೆ. ಆದ್ದರಿಂದ ಪರಿಸ್ಥಿತಿಯನ್ನು ನೋಡಿಕೊಂಡು ಮಾಡಬೇಕೇ ವಿನಹ ನಾವು ಅದಕ್ಕೆ ರೂಲ್ಸ್ ಪಾಕಿಕೊಂಡು ಮಾಡುವುದು ಕಷ್ಟವಾಗುತ್ತದೆ.

ಶ್ರೀ ಕೆ. ಎಂ. ನಾಗಣ್ಣ.—ಮಂತ್ರಿಗಳು ಪಕ್ಷದ ಕಾರ್ಯಕ್ರಮಕ್ಕಾಗಲಿ ಅಥವಾ ಪಕ್ಷದ ಗೊಂದಲದ ಕಾರ್ಯಕ್ರಮಕ್ಕಾಗಲಿ ದೆಹಲಿಗೆ ಅಥವಾ ಬೇರೆ ಕಡೆ ಹೋದರೆ, ಅದಕ್ಕೆ ಆದ ಖರ್ಚುಗಳು ಸಹ ಇದರಲ್ಲಿ ಸೇರುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪಕ್ಷದ ಕಾರ್ಯಕ್ರಮಕ್ಕಾಗಲಿ ಅಥವಾ ಸ್ವಂತ ಕಾರ್ಯಕ್ರಮಕ್ಕಾಗಲಿ ಸರ್ಕಾರದ ಹಣವನ್ನು ಉಪಯೋಗ ಮಾಡತಕ್ಕದ್ದು ನಿಷೇಧ. ಅಂಥವುಗಳು ಯಾವುದಾದರೂ ಸರ್ಕಾರದ ಗಮನಕ್ಕೆ ಬಂದರೆ ವಿಚಾರ ಮಾಡುತ್ತೇವೆ.

DEVELOPMENT WORKS IN BANGALORE URBAN DISTRICT

156. Sri K. SRIRAMULU (Gandhinagar).—

Will the Minister for Municipal Administration be pleased to state :—

The allomtent made for the development works, under the following heads, *viz.*, Health, Sanitation, Education, slum clearance, roads, water supply, animal husbandry and co-operation to be carried out in Bangalore Urban District with particular reference to Gandhinagar Constituency for the year 1972-73 ?

Sri B. BASAVALINGAPPA (Minister for Municipal Administration).—

Amount spent during 1972-73 by the Bangalore City Corporation on the following works :

Roads—Rs. 9,91,900

Water Supply—Rs. 7,000

Education—Rs. 2,67,280

Break up figures are not available divisionwise for the following items :

Health

Sanitation

Slum clearance

No expenditure is incurred by the Corporation on items of works relating to Animal Husbandry and Co-operation.